# ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ

ಮಿನಿ ವಿಧಾನ ಸೌಧ ಪಕ್ಕದಲ್ಲಿ, ಸ್ಟೇಶನ್ ಮುಖ್ಯ ರಸ್ತೆ, ಕಲಬುರಗಿ-585102

# Urban Development Authority, Kalaburagi

Beside Mini Vidhan Soudha, Station Main road, Kalaburagi-585102

Email:commissionergda@gmail.com/ Phone No. 08472-221214


ಸಂಖ್ಯೆ: ನಪ್ರಾಕ/ನಿವೇಶನಗಳ E-ಹರಾಜು/3/2025-26 ದಿನಾಂಕ: 16-09-2026

## ಪ್ರಾಧಿಕಾರವು ಅಭಿವೃದ್ಧಿಪಡಿಸಿದ ಅಟಲ ಬಿಹಾರಿ ವಾಜಪೇಯಿ ವಸತಿ ಬಡಾವಣೆಯಲ್ಲಿಯ ವಾಣಿಜ್ಯ, ಮೂಲೆ ಹಾಗೂ ಬಿಡಿ ನಿವೇಶನಗಳ ಇ-ಹರಾಜು ಪ್ರಕಟಣೆ

| | | | |
|---|---|---|---|
| 1) | ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಪ್ರೋಸೆಸಿಂಗ್ ಶುಲ್ಕ ಮತ್ತು ಇ.ಎಂ.ಡಿ. ಪಾವತಿಸುವ ದಿನಾಂಕ ಹಾಗೂ ಸಮಯ | : | ದಿನಾಂಕ: 21-09-2026 ರಿಂದ ದಿನಾಂಕ 30-09-2026 ಸಾಯಂಕಾಲ 5.30 ಗಂಟೆವರೆಗೆ |
| 2) | ಇ-ಹರಾಜಿನಲ್ಲಿ ಬಿಡ್ಡ ಮಾಡುವ ಕೊನೆಯ ದಿನಾಂಕ ಮತ್ತು ಸಮಯ | : | ದಿನಾಂಕ: 05-10-2026 ರಿಂದ ದಿನಾಂಕ: 06-10-2026 ರ ಸಾಯಂಕಾಲ 5.30 ಗಂಟೆವರೆಗೆ (ಡೆಲ್ಟಾ ಟೈಮ್ 5.00 ನಿಮಿಷ) |

| ಇ-ಹರಾಜಿನಲ್ಲಿ ಭಾಗವಹಿಸಲು ಪಾವತಿ ಮಾಡಬೇಕಾದ ಇ.ಎಂ.ಡಿ. ಹಣ | | ಕನಿಷ್ಟ ಬಿಡ್ಡ ಬದಲಾವಣೆ ಮೊತ್ತ |
|---|---|---|
| 54 ಚದರ ಮೀಟರ ಅಳತೆ ಇರುವ ನಿವೇಶನಗಳಿಗೆ | 50,000/- | ರೂ. 20,000/- |
| 55 ಚದರ ಮೀಟರ ಅಳತೆಗಿಂತ ಮೇಲ್ಪಟ್ಟ ನಿವೇಶನಗಳಿಗೆ | 1,00,000/- | |

| ಕ್ರಸಂ. | ನಿವೇಶನ ಸಂಖ್ಯೆ | ಅಳತೆ | ವಿಸ್ತೀರ್ಣ ಮೀಟರಗಳಲ್ಲಿ | ಚ.ಮೀಟರಗೆ ನಿಗಧಿಪಡಿಸಿರುವ ದರ(ರೂ.ಗಳಲ್ಲಿ) | ಪ್ರಾಧಿಕಾರದಿಂದ ನಿಗಧಿಪಡಿಸಿದ ಕನಿಷ್ಠ ಬೆಲೆ (ರೂ. ಲಕ್ಷಗಳಲ್ಲಿ) | ಷರಾ |
|---|---|---|---|---|---|---|
| 1 | 229 | (27+23)/2 X 24 | 600 | 27500 | 1,65,00,000/- | ವಾಣಿಜ್ಯ |
| 2 | 233 | (23+20)/2 X 24 | 516 | 27500 | 1,41,90,000/- | ವಾಣಿಜ್ಯ |
| 3 | 174 | (21+25)/2 X 24 | 552 | 22500 | 1,24,20,000/- | ಮೂಲೆ |
| 4 | 1509 | 18X11 | 198 | 22500 | 44,55,000/- | ಮೂಲೆ |
| 5 | 1517 | 18X18 | 324 | 22500 | 72,90,000/- | ಮೂಲೆ |
| 6 | 32 | 12X18 | 216 | 22500 | 48,60,000/- | ಮೂಲೆ |
| 7 | 33 | 12X18 | 216 | 22500 | 48,60,000/- | ಮೂಲೆ |
| 8 | 570 | 8X9 | 72 | 22500 | 16,20,000/- | ಮೂಲೆ |
| 9 | 601 | 8X9 | 72 | 22500 | 16,20,000/- | ಮೂಲೆ |
| 10 | 63 | 12X18 | 216 | 18750 | 40,50,000/- | ಬಿಡಿ |
| 11 | 47 | 12X18 | 216 | 18750 | 40,50,000/- | ಬಿಡಿ |
| 12 | 1567 | 12X18 | 216 | 18750 | 40,50,000/- | ಬಿಡಿ |
| 13 | 433 | 9X12 | 108 | 18750 | 20,25,000/- | ಬಿಡಿ |
| 14 | 438 | 9X12 | 108 | 18750 | 20,25,000/- | ಬಿಡಿ |
| 15 | 449 | 9X12 | 108 | 18750 | 20,25,000/- | ಬಿಡಿ |
| 16 | 490 | 9X12 | 108 | 18750 | 20,25,000/- | ಬಿಡಿ |
| 17 | 502 | 9X12 | 108 | 18750 | 20,25,000/- | ಬಿಡಿ |
| 18 | 551 | 9X12 | 108 | 18750 | 20,25,000/- | ಬಿಡಿ |
| 19 | 858 | 9X12 | 108 | 18750 | 20,25,000/- | ಬಿಡಿ |
| 20 | 1116 | 9X12 | 108 | 18750 | 20,25,000/- | ಬಿಡಿ |
| 21 | 1161 | 9X12 | 108 | 18750 | 20,25,000/- | ಬಿಡಿ |
| 22 | 1205 | 9X12 | 108 | 18750 | 20,25,000/- | ಬಿಡಿ |
| 23 | 1171 | 9X12 | 108 | 18750 | 20,25,000/- | ಬಿಡಿ |
| 24 | 1078 | 9X12 | 108 | 18750 | 20,25,000/- | ಬಿಡಿ |
| 25 | 381 | 6X9 | 54 | 18750 | 10,12,500/- | ಬಿಡಿ |
| 26 | 471 | 6X9 | 54 | 18750 | 10,12,500/- | ಬಿಡಿ |
| 27 | 1222 | 6X9 | 54 | 18750 | 10,12,500/- | ಬಿಡಿ |
| 28 | 477 | 6X9 | 54 | 18750 | 10,12,500/- | ಬಿಡಿ |
| 29 | 612 | 6X9 | 54 | 18750 | 10,12,500/- | ಬಿಡಿ |

| ಕ್ರ.ಸಂ. | ನಿವೇಶನ ಸಂಖ್ಯೆ | ಅಳತೆ | ವಿಸ್ತೀರ್ಣ ಮೀಟರಗಳಲ್ಲಿ | ಚ.ಮೀಟರಗೆ ನಿಗಧಿಪಡಿಸುರುವ ದರ(ರೂ.ಗಳಲ್ಲಿ) | ಪ್ರಾಧಿಕಾರದಿಂದ ನಿಗಧಿಪಡಿಸಿದ ಕನಿಷ್ಠ ಬೆಲೆ (ರೂ. ಲಕ್ಷಗಳಲ್ಲಿ) | ಷರಾ |
|---|---|---|---|---|---|---|
| 30 | 616 | 6X9 | 54 | 18750 | 10,12,500/- | ಬಿಡಿ |
| 31 | 1386 | 6X9 | 54 | 18750 | 10,12,500/- | ಬಿಡಿ |
| 32 | 1313 | 6X9 | 54 | 18750 | 10,12,500/- | ಬಿಡಿ |

**ಇ-ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಕೆಳಕಂಡಂತಿವೆ**

ಇ-ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: kppp.karnataka.gov.in ರ Department : Kalaburagi Urban Development Authority ನಲ್ಲಿ ಪರಿಶೀಲಿಸಬಹುದು ಹಾಗೂ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಹರಾಜಿನ ಷರತ್ತುಗಳಿಗೆ ಒಪ್ಪಿದಲ್ಲಿ ಮಾತ್ರ ತಾವು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ.

1) ಹರಾಜಿನಲ್ಲಿ ಭಾಗವಹಿಸುವವರು ಭಾರತಿಯ ಪ್ರಜೆಯಾಗಿರಬೇಕು.

2) ಫೋಟೋ, ಸ್ಪೆಸಿಮೆನ್ ಸಹಿ ಕಡ್ಡಾಯವಾಗಿ ಲಗತ್ತಿಸಬೇಕು ವಿಳಾಸದ ಸಾಬೀತಿಗಾಗಿ ಎ) ಮತದಾರರ ಗುರುತಿನ ಚೀಟಿ, ಬಿ) ವಾಹನ ಚಾಲನೆಯ ಪರವಾನಗಿ ಸಿ) ಪಾಸಪೋರ್ಟ, ಡಿ)ಆಧಾರ ಕಾರ್ಡ ಪ್ರತಿ, ಇ) ಪ್ಯಾನಕಾರ್ಡ ಪ್ರತಿ ಇವುಗಳನ್ನು ಗೆಜೆಟೆಡ್ ಅಧಿಕಾರಿ/ನೋಟರಿಯಿಂದ ದೃಢೀಕರಿಸಬೇಕು. ಭಾರತೀಯ ಅನಿವಾಸಿ ಆಗಿದ್ದಲ್ಲಿ (N.R.I.) ಎಂಬೆಸ್ಸಿ ಕಛೇರಿಯಿಂದ ದೃಢೀಕರಿಸಿ ಲಗತ್ತಿಸಬೇಕು. (ನಿರ್ದಿಷ್ಟಪಡಿಸಿದ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಿರಿ (htpp://www.kppp.karnataka.gov.in)

3) ಇ-ಮೆಲ್ ವಿಳಾಸ, ಮೋಬೈಲ್ ದೂರವಾಣಿ ಸಂಖ್ಯೆ, ಸ್ಥಿರ ದೂರವಾಣಿ (ಲ್ಯಾಂಡ್ ಲೈನ್) ಸಂಖ್ಯೆ ಮತ್ತು ಪೂರ್ಣ ಅಂಚೆ ವಿಳಾಸವುಳ್ಳ ಮಾಹಿತಿಯ ನಮೂನೆಯನ್ನು ಲಗತ್ತಿಸಬೇಕು. (ನಿರ್ದಿಷ್ಟಪಡಿಸಿದ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಿರಿ (htpp://www.kppp.karnataka.gov.in)

4) ಪಾಲುದಾರ ಸಂಸ್ಥೆ/ ಲಿಮಿಟೆಡ್ ಕಂಪನಿಗಳು/ಟ್ರಸ್ಟ್‌ಗಳು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೀಗೆ ಭಾಗವಹಿಸುವ ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪನಿಗಳು/ಟ್ರಸ್ಟ್‌ಗಳು ಹರಾಜಿನಲ್ಲಿ ಭಾಗವಹಿಸುವ ಮುನ್ನ ತಮ್ಮ ಪಾಲುದಾರಿಗೆ ಸಂಸ್ಥೆಯ ನೊಂದಣಿಯನ್ನು ಭಾರತ ದೇಶದಲ್ಲಿ ಮಾಡಿಕೊಂಡಿರಬೇಕು.

5) ಹರಾಜಿನ ನಿವೇಶನಗಳಿಗೆ ಸಂಬಂಧಿಸಿದ ಎಲ್ಲಾ ಕಾನೂನು ಪ್ರಕರಣಗಳು ಕಲಬುರಗಿ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತದೆ.

6) ಇ-ಹರಾಜಿನ ಶುಲ್ಕವನ್ನು ಇ-ಪ್ರೋಕ್ಯೂರಮೆಂಟ ಪೋರ್ಟಲ್ ಮೂಲಕ ಐಸಿಐಸಿಐ (ICICI) ಬ್ಯಾಂಕ್‌ಗೆ Debit card/Net banking ಮೂಲಕ ಪಾವತಿ ಮಾಡಬೇಕು.

7) **ಅತಿ ಹೆಚ್ಚಿನ ಮೊತ್ತದ ಬಿಡ್ಡದಾರರು ಬಿಡ್ ಅಂಗೀಕೃತಗೊಂಡಿರುವ ಬಗ್ಗೆ ಇ-ಪೋರ್ಟಲ್ ಮುಖಾಂತರವೇ ಪರಿಶೀಲಿಸಿಕೊಂಡು, ಬಿಡ್‌ನ ಪೂರ್ಣ ಮೊಬಲಗಿನ ಪೈಕಿ ಶೇ. 25% ರಷ್ಟು ಮೊತ್ತವನ್ನು (ಇ.ಎಂ.ಡಿ. ಮೊಬಲಗು ರೂ.1,00,000/- ಅಥವಾ 50,000/- ಗಳನ್ನು ಹೊರತುಪಡಿಸಿ) ಇ-ಹರಾಜು ಮುಕ್ತಾಯಗೊಂಡು ಬಿಡ್ ಅಂಗೀಕೃತಗೊಂಡ ಅವಧಿಯ ನಂತರದ (ರಜಾ ದಿನಗಳನ್ನು ಹೊರತುಪಡಿಸಿ) 72 ಗಂಟೆಗೆ ಅಥವಾ ಅದರೊಳಗಾಗಿ ಈ ಕೆಳಕಂಡ ಬ್ಯಾಂಕ್ ಖಾತೆಗೆ ಪಾವತಿ ಮಾಡಬೇಕು. (ಪಾವತಿ ಮಾಡಿದ ನಂತರ ಅದರ ಪ್ರತಿಯನ್ನು ಕಛೇರಿಗೆ ಸಲ್ಲಿಸುವುದು) ಜೊತೆಗೆ ಎನ್‌ಒಸಿಗಾಗಿ ರೂ. 100/- ಗಳನ್ನು ಪಾವತಿಸತಕ್ಕದ್ದು. ಖಾತೆದಾರರ ಹೆಸರು ಎಸ್.ಬಿ.ಐ. ಸ್ಟೇಶನ್ ಬಜಾರ ಶಾಖೆಯ SBI Collect Link https://onlinesbi.sbi/sbicollect/icollecthome.htm?corpID=4911579 ಪೋರ್ಟಲ್‌ನ್ನು ಕ್ಲಿಕ್ ಮಾಡಿದ ನಂತರ Schemes and Infrastructure Development Fund 4 ಕ್ಲಿಕ್ ಮಾಡಿ ವಿವರಗಳನ್ನು ನಮೂದಿಸಿ ಸಂದಾಯ ಮಾಡತಕ್ಕದ್ದು. ಅಥವಾ ನಿಮ್ಮ ಹತ್ತಿರದ ಆನ್‌ಲೈನ್ ಸೆಂಟರನಲ್ಲಿ / ಸಿ.ಎಸ್.ಪಿ. ಸೆಂಟರಗಳಲ್ಲಿಯೂ ಕೂಡಾ ಸಂಪರ್ಕಿಸಿ ಮೇಲೆ ತಿಳಿಸಿದ ಪೋರ್ಟಲ್‌ನಲ್ಲಿ ಹಣ ಸಂದಾಯ ಮಾಡಬಹುದಾಗಿದೆ. ಮತ್ತು ಸಂದಾಯ ಮಾಡಿದ ಪ್ರತಿಯನ್ನು ಪ್ರಾಧಿಕಾರಕ್ಕೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ನಿಗಧಿತ ಅವಧಿಯಲ್ಲಿ ಶೇ. 25% ರಷ್ಟು ಮೊತ್ತ ಪಾವತಿ ಮಾಡದೇ ಇದ್ದಲ್ಲಿ ನಿವೇಶನ ರದ್ದುಪಡಿಸಿ ಇ.ಎಂ.ಡಿ. ಮೊತ್ತ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.**

8) **ಹೆಚ್-1 ಬಿಡ್ಡದಾರರು ತಮ್ಮ ಬಿಡ್ಡನ್ನು ಧೃಡೀಕರಿಸಿಕೊಂಡು ಬಿಡ್ಡ ಮೊತ್ತದ ಶೇ. 25% ರಷ್ಟು ಮೊತ್ತವನ್ನು (72 ಗಂಟೆಯೊಳಗಾಗಿ) ಪಾವತಿಸಿ ಮೂಲ ರಸೀದಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು. ಇದಕ್ಕಾಗಿ ಪ್ರತ್ಯೇಕವಾಗಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಪತ್ರವನ್ನು ಜಾರಿ ಮಾಡುವುದಿಲ್ಲ.**

9) ಯಶಸ್ವಿ ಬಿಡ್ಡದಾರರು ಶೇ. 25% ಭಾಗ ಮತ್ತು 75% ಭಾಗ ಹಣವನ್ನು ಆರ್.ಟಿ.ಜಿ.ಎಸ್. ಮೂಲಕ ಎಸ್.ಬಿ.ಐ. ಕಲೆಕ್ಟ ಬ್ಯಾಂಕಿಗೆ ನಿಮ್ಮ ಖಾತೆಯ ಮೂಲಕ ಪಾವತಿಸತಕ್ಕದ್ದು. ಆರ್.ಟಿ.ಜಿ.ಎಸ್. ಮಾಡುವಾಗ ಬಿಡ್ಡದಾರರ ಹೆಸರು, ಬಿಡ್ಡ ಮಾಡಿದ ನಿವೇಶನ ಸಂಖ್ಯೆ ಮತ್ತು ಬಡಾವಣೆಯ ಹೆಸರನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

10) ಹರಾಜಿನ ಸೂಚನಾ ಪತ್ರ ಪಡೆದ ದಿನಾಂಕದಿಂದ 45 ದಿವಸದೊಳಗೆ ನಿವೇಶನದ ಬಾಕಿ ಹಣ ಪಾವತಿಮಾಡದೇ ಇದ್ದಲ್ಲಿ ದಿನಾಂಕದಿಂದ 45 ದಿವಸ ಬಡ್ಡಿ ರಹಿತ, 90 ದಿವಸ ಶೇ. 18% ರಷ್ಟು ಬಡ್ಡಿಯೊಂದಿಗೆ ಹಾಗೂ 30 ದಿವಸ ಶೇ. 21% ರಷ್ಟು ಬಡ್ಡಿಯೊಂದಿಗೆ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಹಣ ಪಾವತಿ ಮಾಡಿದ ನಂತರ ನಿಮ್ಮ ಸ್ವಂತ ಖರ್ಚಿನಲ್ಲಿ 45 ದಿವಸಗಳ ಒಳಗಡೆ ನೊಂದಣಿ ಮಾಡಿಕೊಳ್ಳತಕ್ಕದ್ದು.

ಒಂದು ವೇಳೆ ಈ ಪೂರ್ಣ ಅವಧಿಯಲ್ಲಿ ನಿವೇಶನದ ಬಾಕಿ ಮೊತ್ತ ಪಾವತಿಸದೇ ಇದ್ದಲ್ಲಿ ನಿವೇಶನ ಪಡೆದವರು ಪಾವತಿ ಮಾಡಿದ ಮುಂಗಡ ಠೇವಣಿ ಹಾಗೂ ಶೇ. 25% ರಷ್ಟು ಮೊತ್ತ ಪಾವತಿ ಮಾಡಿದ್ದನ್ನು ಮುಟ್ಟುಗೋಲು ಹಾಕಿಕೊಂಡು ಹರಾಜಾದ ನಿವೇಶನವನ್ನು ರದ್ದುಪಡಿಸಲಾಗುವುದು.

11) ನಿವೇಶನಗಳನ್ನು ಎಲ್ಲಿ ಹೇಗಿವೆಯೋ ಹಾಗೆಯೇ ಹರಾಜಿಗೆ ಒಳಪಡಿಸಲಾಗುವುದು. ಹರಾಜಿನಲ್ಲಿ ಪಡೆದ ನಿವೇಶನ ಉಪವಿಭಜನೆ ಮಾಡಲು ಅವಕಾಶ ಇರುವುದಿಲ್ಲ.

12) ಬ್ಯಾಂಕ್ ಸೇವಾ ಶುಲ್ಕ, ಇ–ಪ್ರೋಕ್ಯೂರಮೆಂಟ ಪ್ರೋಸೆಸಿಂಗ್ ಫೀ ಇತ್ಯಾದಿಗಳನ್ನು ಬಿಡ್ಡದಾರರೇ ಭರಿಸತಕ್ಕದ್ದು. ಒಂದು ವೇಳೆ ತಾಂತ್ರಿಕ ದೋಷದಿಂದ ಇ–ಹರಾಜು ಪ್ರಕ್ರಿಯೆ ಸ್ಥಗಿತ / ರದ್ದುಗೊಂಡಲ್ಲಿ ಬ್ಯಾಂಕ್ ಸೇವಾ ಶುಲ್ಕ, ಇ–ಪ್ರೋಕ್ಯೂರಮೆಂಟ ಪ್ರೋಸೆಸಿಂಗ್ ಫೀ ಮರು ಪಾವತಿ ಮಾಡಲಾಗುವುದಿಲ್ಲ.

13) ಇ–ಪ್ರೋಕ್ಯೂರಮೆಂಟ ತಂತ್ರಾಂಶ(ಸರ್ವರ್) ವಿಫಲವಾದಲ್ಲಿ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

14) ಹರಾಜಾದ ನಿವೇಶನದ ಬಿಡ್ಡನ್ನು ಕ.ನ.ಪ್ರಾ. ನಿವೇಶನಗಳ ಹಂಚಿಕೆ ನಿಯಮ 1991 ಕಲಂ 7 ರ ಪ್ರಕಾರ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರವು ಹೊಂದಿರುತ್ತದೆ.

15) ಇ–ಹರಾಜನ್ನು ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಸುತ್ತೋಲೆ ಸಂಖ್ಯೆ ನಅಇ/291/ಅಪ್ರಾವಿ/98 ದಿನಾಂಕ:24–11–2000 ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಮೂಲೆ ಮತ್ತು ವಾಣಿಜ್ಯ ನಿವೇಶನಗಳ ವಿಲೇವಾರಿ ನಿಯಮ 1991 ರ ರಿತ್ಯ ಕ್ರಮವಹಿಸಲಾಗುವುದು.

16) ಯಾವುದೇ ಬದಲಾವಣೆಗಳಿದ್ದಲ್ಲಿ ವೆಬ್‌ಸೈಟ್ ಮೂಲಕ ಮಾತ್ರವೇ ಪ್ರಕಟಿಸಲಾಗುವುದು.

17) ಇ–ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಳಿಸಿದ ನಂತರ ಇ.ಎಂ.ಡಿ. ಮೊತ್ತವನ್ನು (htpp://www.kppp.karnataka.gov.in) ರವರು ಹಿಂದಿರುಗಿಸಲು ಕ್ರಮವಹಿಸುತ್ತಾರೆ.

18) ಇ–ಹರಾಜು ಕೊನೆಯ ಕ್ಷಣದಲ್ಲಿ ಬರುತ್ತಿರುವ ಬಿಡ್ಡುಗಳಿಗೆ ಡೆಲ್ಟಾಟೈಮ್ 5 ನಿಮಿಷಗಳ ಕಾಲ ವಿಸ್ತರಣೆಯಾಗುತ್ತದೆ. ಉದಾ: ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಅಂತಿಮ ಸಮಯ 5.30 ಎಂದಿದ್ದಲ್ಲಿ ಅದನ್ನು 5.27 ಗಂಟೆಗಳಿಂದ ಪ್ರಾರಂಭಿಸಿ 5.32 ಗಂಟೆಗಳ ವರೆಗೆ ಅವಧಿ ವಿಸ್ತರಣೆಯಾಗುತ್ತದೆ. ಮತ್ತೇ ಯಾರಾದರೂ ಬಿಡ್ಡದಾರರು ಬಿಡ್ಡನ್ನು 5.31 ಗಂಟೆಗೆ ಮಾಡಿದ್ದಲ್ಲಿ 5.36 ವರೆಗೆ ಅವಧಿ ವಿಸ್ತರಣೆಯಾಗುತ್ತದೆ.

19) ಇ–ಹರಾಜಿನಲ್ಲಿ ಭಾಗವಹಿಸಿ ನಿವೇಶನ ಪಡೆಯಲು ಅನುಸರಿಸಬೇಕಾದ ಕ್ರಮದ ಬಗ್ಗೆ ಮಾಹಿತಿ ಬೇಕಾದಲ್ಲಿ kppp.karnataka.gov.in ಗೆ ಲಾಗಿನ್ ಆಗಿ ಮುಖಪುಟದ **ಹರಾಜುಗಳ ಪಟ್ಟಿ (Auctions)** ವಿಭಾಗದಲ್ಲಿ ಲಭ್ಯವಿರುವ Simplified e-Auction user guide ಅನ್ನು Download ಮಾಡಿಕೊಳ್ಳಬಹುದಾಗಿದೆ.

20) ಇ.ಎಂ.ಡಿ. ಮೊಬಲಗು ಮತ್ತು ಇ–ಹರಾಜು ಪ್ರಕ್ರಿಯೆ ಶುಲ್ಕವನ್ನು ಐಸಿಐಸಿಐ ಬ್ಯಾಂಕ್ ಮುಖಾಂತರ ಪಾವತಿಸಬಹುದಾಗಿದೆ.

21) ಅಂತಿಮವಾಗಿ ನಿವೇಶನವನ್ನು ಬಿಡ್ಡುದಾರರಿಗೆ ಹಸ್ತಾಂತರಿಸುವ ಸಮಯದಲ್ಲಿ ಅಳತೆ ಕಡಿಮೆ ಇದ್ದ ಸಂದರ್ಭದಲ್ಲಿ ಬಿಡ್ಡುದಾರರ ಒಪ್ಪಿಗೆ ಪಡೆದು ಬಿಡ್‌ಆಗಿರುವ ದರದಲ್ಲಿಯೇ ಕಡಿಮೆ ವಿಸ್ತೀರ್ಣಕ್ಕೆ ಹಣ ಮರು ಪಾವತಿಸಲಾಗುವುದು. ಒಂದು ವೇಳೆ ಬಿಡ್ಡುದಾರರು ಒಪ್ಪದಿದ್ದ ಸಂದರ್ಭದಲ್ಲಿ ಸದರಿ ಹರಾಜನ್ನು ರದ್ದುಪಡಿಸಲಾಗುವುದು ಮತ್ತು ನಿವೇಶನದ ಅಳತೆ ಹೆಚ್ಚಾಗಿ ಇದ್ದ ಸಂದರ್ಭದಲ್ಲಿ ಬಿಡ್ ಆಗಿರುವ ದರದಲ್ಲಿಯೇ ಹೆಚ್ಚುವರಿ ವಿಸ್ತೀರ್ಣಕ್ಕೆ ಹಣ ಪಾವತಿಸಿಕೊಳ್ಳಲಾಗುವುದು. ಇದಕ್ಕೆ ಬಿಡ್ಡದಾರರು ಒಪ್ಪದಿದ್ದ ಸಂದರ್ಭದಲ್ಲಿ ನಿವೇಶನದ ಪೂರ್ಣ ಮೊಬಲಗಿನ ಪೈಕಿ 25% ರಷ್ಟು ಮೊಬಲಗನ್ನು ಮುಟ್ಟುಗೋಲು ಹಾಕಿಕೊಂಡು ಹರಾಜನ್ನು ರದ್ದುಪಡಿಸಿ ಉಳಿದ ಹಣವನ್ನು ಮರು ಪಾವತಿಸಲಾಗುವುದು.

22) ನಿವೇಶನ /ಸ್ಥಳದ (Location) ಮಾಹಿತಿಗಾಗಿ ವೆಬ್‌ಸೈಟ್ kppp.karnataka.gov.in ರ Department : Kalaburagi Urban Development Authority ನಲ್ಲಿ ಪರಿಶೀಲಿಸಬಹುದು ಮತ್ತು ಅಥವಾ ಮಾಹಿತಿಗಾಗಿ ಕಛೇರಿಯ ಅವಧಿಯಲ್ಲಿ ಕಛೇರಿಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

23) **Corrigendum, Corrections ಹಾಗೂ Time extension ಇತ್ಯಾದಿಗಳನ್ನು ವೆಬ್ ಸೈಟನಲ್ಲಿ ಅಳವಡಿಸಲಾಗುವುದು. ಅಥವಾ ಈ ಕಾರ್ಯಾಲಯಕ್ಕೆ ಸಂಪರ್ಕಿಸಿ ವಿವರಗಳನ್ನು ಪಡೆದುಕೊಳ್ಳಬಹುದು.**

(ಶೈಲೇಂದ್ರ ಸಿಂಗ್)
ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ,
ಕಲಬುರಗಿ

(ಮಜರ್ ಆಲಂ ಖಾನ್)
ಅಧ್ಯಕ್ಷರು,
ನಗರಾಭಿವೃದ್ಧಿ ಪ್ರಾಧಿಕಾರ,
ಕಲಬುರಗಿ